ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ,

12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86.

# ದಿನಾಂಕ:21-05-2022 ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ:ಬಿ12(5)/ಪಿಆರ್/35/2020-21 ದಿನಾಂಕ:21:09:2020

(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್/42/2022-23 ದಿನಾಂಕ:17-05-2022

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ಪಿ. ವಿಶ್ವನಾಥ್ | ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ), ಬಿಬಿಎಂಪಿ, ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67. |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು. |
| 3. | ಶ್ರೀ. ಎಲ್ ತಿಮ್ಮರಸ್ | ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ. |
| 4. | ಶ್ರೀ. ಉದಯ ಶಂಕರ್ | 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. |
| 5. | ಶ್ರೀ. ಆಕಾಶ್ | ವಾರ್ಡ್ ಸಮಿತಿ ಸದಸ್ಯರು. |
| 6. | ಶ್ರೀ. ಕೆ ಗಂಗಹನುಮಯ್ಯ | ವಾರ್ಡ್ ಸಮಿತಿ ಸದಸ್ಯರು. |
| 7. | ಶ್ರೀ. ಸತೀಶ್ ರಾಮದಾಸ್ | ವಾರ್ಡ್ ನಾಗರೀಕರು. |
| 8. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್-67. |
| 9. | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಖೆ ಮೇಸ್ತ್ರಿ, ಪಶ್ಚಿಮ ವಲಯ. |
| 10. | ಶ್ರೀ. ಛಾಯಾಪತಿ, ವಾರ್ಡ್-44 | ಕಿರಿಯ ಆರೋಗ್ಯ ಪರೀವಿಕ್ಷಕರು (ಪ್ರಭಾರ) ಘ.ತ್ಯಾ.ನಿ. |
| 11. | ಶ್ರೀ. ಲಕ್ಷೀಕಾಂತ್ ಜಿ | ಬೆಂ.ಜ.ಮಂ ಜಲ ಪರೀವಿಕ್ಷಕರು ಎನ್ ಡಬ್ಲೂ-2. |
| 12. | ಕುಮಾರಿ. ಪುಷ್ಪ | ಸಹಾಯಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ. |
| 13. | ಶ್ರೀ. ಶ್ರೀನಿವಾಸ್ ಗೌಡ | ಘ.ತ್ಯಾ.ನಿ ಗುತ್ತಿಗೆದಾರರು. |
| 14. | ಶ್ರೀ. ಆನಂದ್ ಮೂರ್ತಿ | ಸಹಾಯಕ ಅಭಿಯಂತರರು, ಬೆಸ್ಕಂ ಎನ್-1 ಉಪವಿಭಾಗ. |
| 15. | ಶ್ರೀ. ಮಲ್ಲಿಕಾರ್ಜುನ | ಹೆಡ್ ಕಾನ್ಸ್‌ಟೆಬಲ್, ಸುಬ್ರಮಣ್ಯನಗರ ಪೋಲೀಸ್ ಠಾಣೆ. |



ಪು.ತಿ.ನೋ.

Scanned by CamScanner

| | | |
|---|---|---|
| 16. | ಶ್ರೀ. ಅರಸಯ್ಯ | ಸಬ್ ಇನ್ಸ್‌ಪೆಕ್ಟರ್, ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆ. |
| 17. | ಶ್ರೀ. ಸತೀಶ್ | ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರು. |
| 18. | ಶ್ರೀ. ಮಲ್ಲಯ್ಯ | ಅರಣ್ಯ ಇಲಾಖೆ, ಪಶ್ಚಿಮ ವಲಯ. |
| 19. | ಮಹಾಲಕ್ಷ್ಮೀಲೇಔಟ್ ಪೊಲೀಸ್ ಠಾಣೆ. | ಗೈರು ಹಾಜರಿ. |
| 20. | ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. | ಗೈರು ಹಾಜರಿ. |
| 21. | ಸಹಾಯಕ ಅಭಿಯಂತರರು, ಬೆಂ.ಜಲಮಂ ಎನ್.ಡಬ್ಲ್ಯೂ-1 | ಗೈರು ಹಾಜರಿ. |
| 22. | ಸಹಾಯಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ. (ಬೋರ್‌ವೆಲ್ ನಿರ್ವಹಣೆ) | ಗೈರು ಹಾಜರಿ. |
| 23. | ಸಹಾಯಕ ಅಭಿಯಂತರರು, ಬೆಸ್ಕಾಂ ಎನ್-7 ಉಪವಿಭಾಗ | ಗೈರು ಹಾಜರಿ. |
| 24. | ವಾರ್ಡ್ ಮಾರ್ಷಲ್ ವಾರ್ಡ್-67. | ಗೈರು ಹಾಜರಿ. |
| 25. | ಪಶು ಕೆಲಸ ವಿಭಾಗ | ಗೈರು ಹಾಜರಿ. |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಮೇ ಮಾಹೆಯ ದಿ: 21/05/2022 ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅಹವಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀ.ಉದಯ ಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. | ವಾರ್ಡ್‌ನ ರಾಜಾಜಿನಗರ 1ನೇ ಆರ್ ಬ್ಲಾಕ್‌ನಲ್ಲಿ 20ನೇ 'ಎ' ಮೈನ್ ಹಾಗು 20ನೇ 'ಬಿ' ಮೈನ್‌ನಲ್ಲಿ ಸಿಸಿ ಕ್ಯಾಮೇರ ಚಾಲ್ತಿಯಲ್ಲಿರುವುದಿಲ್ಲ ಇವುಗಳನ್ನು ಸರಿಪಡಿಸಲು ಸಭೆಯಲ್ಲಿ ಕೋರಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್-67 | ವಾರ್ಡ್‌ನ ರಾಜಾಜಿನಗರ 1ನೇ ಆರ್ ಬ್ಲಾಕ್‌ನ ಸಂಘದ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ವಾರ್ಡ್‌ನಲ್ಲಿ ಸಿಸಿ ಕ್ಯಾಮೇರಾ ದುರಸ್ತಿ ಹಾಗು ನಿರ್ವಹಣೆ ಮಾಡಲು ಅನುಮೋದನೆ ದೊರೆತಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-67 ನಾಗಪುರದಲ್ಲಿ ಕೋವಿಡ್-19ಗೆ ಸಂಭಂಧಿಸಿದಂತೆ ಮಾಹಿತಿಗಳ ವಿವರಣೆ ನೀಡುವಂತೆ ಶ್ರೀ, ಗಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸಭೆಯಲ್ಲಿ ಸೂಚಿಸಿದರು. |

ವಿಶ್ವನಾಥ.ಎ

ಪು.ತಿ.ನೋ.



Scanned by CamScanner

| | |
|---|---|
| ಶ್ರೀ. ಗಂಗಯ್ಯ ಹಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್-67 | ಶ್ರೀ, ಗಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡುತ್ತಾ, ಕಳೆದ ಒಂದು ವಾರದಿಂದ ಇತ್ತೀಚಿನ ದಿನಗಳಲ್ಲಿ ಯಾವುದೇ ಹೊಸ ಪ್ರಕರಣಗಳು ಕಂಡುಬಂದಿರುವುದಿಲ್ಲ ಮತ್ತು ಯಾವುದೇ ಡೆತ್ ಕೇಸ್‌ಗಳು ಕಂಡುಬಂದಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಕೆ ಗಂಗಹನುಮಯ್ಯ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಕಮಲಮ್ಮನ ಗುಂಡಿ ಆಟದ ಮೈದಾನದ ಹತ್ತಿರ ಬೀದಿ ದೀಪದ ಬಾಕ್ಸ್ ದುರಸ್ಥಿಯಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಆಕಾಶ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಅನನ್ಯ ಆಸ್ಪತ್ರೆ ಹತ್ತಿರ ಬೀದಿ ದೀಪದ ಬಾಕ್ಸ್ ದುರಸ್ಥಿಯಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಗಳ ಸಂಭಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರಿಗೆ ಕ್ರಮವಹಿಸಲು ಸೂಚಿಸಿದರು ಹಾಗು ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗದ ಶ್ರೀ ಆನಂದ್‌ವರಿಗೆ ದೂರವಾಣಿ ಮೂಲಕ ದೂರಿನ ಬಗ್ಗೆ ತಿಳಿಸಿ ಸೂಕ್ತ ಕ್ರಮವಹಿಸಲು ಸೂಚಿಸಿದರು |
| ಶ್ರೀ. ಸತೀಶ್ ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರು | ವಾರ್ಡ್‌ನ ಸಮಿತಿ ಸದಸ್ಯರ ದೂರಗಳ ಸಂಭಂದಿಸಿದಂತೆ ಸ್ಥಳ ಪರೀಶಿಲಿಸಿ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಆಕಾಶ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಅನನ್ಯ ಆಸ್ಪತ್ರೆ ಎದುರು ರಸ್ತೆಗೆ ಡಿವೈಡರ್ ಅಳವಡಿಸಬೇಕು ಇದರಿಂದ ರಸ್ತೆ ಅಪಘಾತವನ್ನು ನಿಯಂತ್ರಿಸಬಹುದೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರು ತಿಳಿಸಿರುವಂತೆ 19ನೇ ಮೈನ್‌ನಿಂದ ಡಾ॥ ರಾಜ್ ಕುಮಾರ್ ರಸ್ತೆಗೆ ಅನನ್ಯ ಆಸ್ಪತ್ರೆ ಎದುರು ರಸ್ತೆ ಪ್ರಾರಂಭದಲ್ಲಿ ರಸ್ತೆಗೆ ಡಿವೈಡರ್ ಅಳವಡಿಸಲು ಕ್ರಮವಹಿಸಲು ಸಭೆಯಲ್ಲಿ ಮಂಡಿಸಿದರು. ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಕಾರ್ಯಪಾಲಕ ಅಭಿಯಂತರಿಗೆ ಪತ್ರ ಮುಖೇನ ಸೂಚಿಸಲು ತಿಳಿಸಿದರು. |
| ಶ್ರೀ. ಕೆ ಗಂಗಹನುಮಯ್ಯ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಬಿ.ಜಿ.ಎಸ್ ಶಾಲೆ ಹತ್ತಿರ ಘ.ತ್ಯಾ.ನಿ ವಿಭಾಗದ ಮೇಸ್ತ್ರೀ ರವರು ಕಸವನ್ನು ಸರಿಯಾಗಿ ತೆಗೆಯುವುದಿಲ್ಲ ಇದರಿಂದ ರಸ್ತೆಯಲ್ಲಿ ಕಸ ಹಾಗೆಯೆ ಇರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕಿರಿಯ ಆರೋಗ್ಯ ಪರೀವಿಕ್ಷಕರಿಗೆ ಕ್ರಮವಹಿಸಲು ಸೂಚಿಸಿದರು. ಖುದ್ದಾಗಿ ಶಾಲೆಗೆ ಭೇಟಿ ನೀಡಿ ಸುಸೂತ್ರವಾಗಿ ಪರಿಹರಿಸಲು ಸೂಚಿಸಿದರು. |
| ಶ್ರೀ. ಛಾಯಾಪತಿ (ಪ್ರಭಾರ ವಾರ್ಡ್-44) ಕಿರಿಯ ಆರೋಗ್ಯ ಪರೀವಿಕ್ಷಕರು, ಘ.ತ್ಯಾ.ನಿ. | ವಾರ್ಡ್‌ನ ನೋಡೆಲ್ ಅಧಿಕಾರಿಗಳು ಸೂಚಿಸರುವಂತೆ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕಪ್ಪು ಚುಕ್ಕಿ ಪ್ರದೇಶಗಳನ್ನು ಕಣ್ಣಗಾವಲು ಮಾಡಿ ಕಸ ಹಾಕುವವರಿಗೆ ದಂಡ ವಿಧಿಸಲು ಹಾಗು ಸಾರ್ವಜನಿಕರಿಗೆ ಅರಿವು ಮೂಡಿಸಲು ನಿರ್ದೇಶಿಸಲಾಯಿತು ಮುಂದುವರಿಯುತ ಹಸಿ ಹಾಗು ಒಣ ತ್ಯಾಜ್ಯ ಸಂಗ್ರಹಕಾರರು ಮನೆ ಮನೆಯಿಂದ ಸಂಗ್ರಹಿಸುವ ಹಸಿ ತ್ಯಾಜ್ಯವನ್ನು ಅವರ ವತಿಯಿಂದಲೇ ಸಂಸ್ಕರಿಸಿ ನಿರ್ವಹಿಸಲು ಸೂಚಿಸುವುದು ಒಂದು ವೇಳೆ ಅನುಪಯುಕ್ತ ಒಣ ತ್ಯಾಜ್ಯವನ್ನು ರಸ್ತೆಗೆ ಬಿಸಾಡಿದಲ್ಲಿ ಅವರಿಗೆ ದಂಡ ವಿಧಿಸಲು ಸೂಚಿಸಲಾಯಿತು. ಮಾರ್ಷಲ್ ಇಬ್ಬರ ಸಮುಖದಲ್ಲಿ ಇನ್ನು ಹೆಚ್ಚು ನಿಷೇದಿತ ಏಕ ಬಳಕೆ ಪ್ಲಾಸ್ಟಿಕ್ ಬಳಕೆದಾರರ ಅಂಗಡಿಗಳನ್ನು ರೈಡ್ ಮಾಡಿ ದಂಡ ಹಾಕಲು ಸೂಚಿಸಿದರು. |



ಮು.ತಿ.ನೋ.

Scanned by CamScanner

| | |
|---|---|
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್-67 | ಮಾನ್ಯ ನೋಡಲ್ ಅಧಿಕಾರಿಯವರು ಸೂಚಿಸಿರುವಂತೆ ಏಕ ಬಳಕೆದಾರರ ಅಂಗಡಿಗಳ ಮೇ ಮಾಡಿ ದಂಡ ಹಾಕಿ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಪಶ್ಚಿಮ ಕಾರ್ಡ್ ರಸ್ತೆಯ ಸ್ಕೈ ವಾಕ್ ಕಾಮಗಾರಿಯು ಶೇ 90% ಮುಕ್ತಾಯಾಗೊಂಡಿದ್ದು, ಸಾರ್ವಜನಿಕರು ಒಡಾಡಲು ಇದುವರೆಗು ಅವಕಾಶ ಕಲ್ಪಸಿರುವುದಿಲ್ಲ, ಇದರಿಂದ ಸಾರ್ವಜನಿಕರು ಶೀಘ್ರವಾಗಿ ಸ್ಕೈ ವಾಕ್ ಕಾಮಗಾರಿಯನ್ನು ಮುಕ್ತಾಯಗೊಳಿಸಿ ಸಾರ್ವಜನಿಕರಿಗೆ ಒಡಾಡಲು ಅವಕಾಶ ಕಲ್ಪಿಸಿಕೊಡಲು ರಸ್ತೆ ಮುಲಭೂತ ಸೌಕರ್ಯರವರು ಕ್ರಮವಹಿಸಲು ಸೂಚಿಸಿದರು. |
| ಶ್ರೀ.ಉದಯ ಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ<br>ಸಂಘದ ಅಧ್ಯಕ್ಷರು. | ವಾರ್ಡ್‌ನ ಪಶ್ಚಿಮ ಕಾರ್ಡ್ ರಸ್ತೆಯ ಇಸ್ಕಾನ್ ದೇವಾಲಯದವರು ನೀರಿನ ಟ್ಯಾಂಕರ್‌ನ ಸೋರಿಕೆಯಿಂದಾಗಿ ನೀರು ರಸ್ತೆಯಲ್ಲಿ ನಿಲ್ಲುತ್ತರುತ್ತದೆ ಇದರಿಂದ ನಿಂತಿರುವ ನೀರನ್ನು ದ್ವಿಚಕ್ರ ವಾಹನದವರು ತಡೆಯಲು ಹೋಗಿ ಅಪಘಾತವಾಗುವ ಸಂಭವವಿರುತ್ತದೆ ಇದರಿಂದ ವಾಹನ ಸವಾರರಿಗೆ ತೀರ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ಇಸ್ಕಾನ್ ದೇವಾಲಯದವರಿಗೆ ವಾಟರ್ ಟ್ಯಾಂಕರ್ ಸೋರಿಕೆಯಿಂದಾಗಿ ನೀರು ನಿಂತು ತೊಂದರೆ ಆಗುತ್ತಿರುವುದನ್ನು ದೂರವಾಣಿ ಮುಖೇನ ತಿಳಿಸಲಾಯಿತು ಹಾಗು ದೂರಿನ ಬಗ್ಗೆ ಕ್ರಮವಹಿಸಲು ಸೂಚಿಸಲಾಯಿತು. ಕ್ರಮ: ಶ್ರೀ.ರವಿ ಕುಮಾರ್, ಸ.ಅ-67 |
| ಶ್ರೀ. ತಿಮ್ಮರಸ್<br>ಕಾರ್ಯಪಾಲಕ ಅಭಿಯಂತರರು,<br>ಮಹಾಲಕ್ಷ್ಮೀಪುರಂ ವಿಭಾಗ. | ವಾರ್ಡ್‌ನಲ್ಲಿ 2022-2023 ನೇ ಸಾಲಿನ ಪಿ.ಒ.ಡ್ಬ್ಲೂ ಅನುದಾನದಡಿಯಲ್ಲಿ ಅನುದಾನ ಲಭ್ಯವಿದ್ದು ವಾರ್ಡ್‌ನಲ್ಲಿ ತುರ್ತು ಕೆಲಸ ನಿರ್ವಹಿಸಲು ಪಟ್ಟಿ ನೀಡಲು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರಿಗೆ ತಿಳಿಸಿದರು ಹಾಗು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ತುರ್ತು ಕಾಮಗಾರಿ ನಿರ್ವಹಿಸುವ ಜಾಗಗಳನ್ನು ಗುರುತಿಸಿ ಸ್ಥಳಕ್ಕೆ ಅನುಗುಣವಾಗಿ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸಲು ಸಭೆಯಲ್ಲಿ ಮಂಡಿಸಲಾಯಿತು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ-67 | ಮಹಾಲಕ್ಷ್ಮಿಪುರಂ ವಿಭಾಗದ ಕಾರ್ಯಪಾಲಕ ಅಭಿಯಂತರರು ಸೂಚಿಸಿರುವಂತೆ 2022-2023 ನೇ ಸಾಲಿನ ಪಿ.ಒ.ಡ್ಬ್ಲೂ ಅನುದಾನದಡಿಯಲ್ಲಿ ತುರ್ತು ಕಾಮಗಾರಿ ನಿರ್ವಹಿಸುವ ಜಾಗಗಳನ್ನು ಗುರುತಿಸಿ ಸ್ಥಳಕ್ಕೆ ಅನುಗುಣವಾಗಿ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನಲ್ಲಿ ಹಲವು ರಸ್ತೆಗಳಲ್ಲಿ ರಸ್ತೆ ನಾಮ ಫಲಕಗಳು ಬಿದ್ದು ಹೋಗಿರುತ್ತವೆ, ಹಾಗು ಹಲವು ರಸ್ತೆಗಳಲ್ಲಿ ನಾಮ ಫಲಕಗಳು ಇರುವುದಿಲ್ಲ ಇದರಿಂದ ರಸ್ತೆಯ ಹೆಸರು ತಿಳಿಯುವುದು ತೊಂದರೆಯಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ-67 | ವಾರ್ಡ್‌ನ ರಸ್ತೆಗಳಲ್ಲಿ ರಸ್ತೆ ನಾಮ ಫಲಕಗಳು ಬಿದ್ದು ಹೋಗಿರುವುದು ಹಾಗು ನಾಮ ಫಲಕಗಳು ಇಲ್ಲದಿರುವುದನ್ನು ಗುರುತಿಸಿ ಅಂದಾಜು ಪಟ್ಟಿ ತಯಾರಿಸಿ ಹೊಸ ನಾಮ ಫಲಕಗಳನ್ನು ಅಳವಡಿಸಲು ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ ಸ್ವಾತಿ ಹೋಟೆಲ್ ಅಂಡರ್ ಪಾಸ್‌ಗೆ ಹಾಗು ರಾಜಾಜಿನಗರ 1ನೇ ಬ್ಲಾಕ್ ಸಿಗ್ನಲ್‌ಗೆ ಹೊಸದಾಗಿ ಸಿಸಿ ಕ್ಯಾಮೇರಾ ಅಳವಡಿಸಬೇಕು ಇದರಿಂದ ವಾಹನ ಅಪಘಾತಗಳನ್ನು ಹಾಗು ವ್ಹೀಲಿಂಗ್ ಮಾಡುವ ಪುಂಡರನ್ನು ಪೋಲೀಸ್ ಇಲಾಖೆಯವರಿಗೆ ನಿಯಂತ್ರಿಸಲು ಸುಲಭವಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ-67 | ವಾರ್ಡ್‌ನಲ್ಲಿ ಈಗಾಗಲೇ ಸಿ.ಸಿ.ಟಿ.ವಿ ಅಳವಡಿಸುವ ಕಾಮಗಾರಿಯು ಮುಕ್ತಯವಾಗಿರುತ್ತದೆ ಸದರಿ ಹೊಸ ಜಾಗಕ್ಕೆ ಸಿಸಿ ಕ್ಯಾಮೇರಾ ಅಳವಡಿಸಲು ಹೋಸ ಅನುದಾನ ಬಿಡುಗಡೆಯಾದಾಗ ಪಟ್ಟಿ ತಯಾರಿಸಿ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ 2ನೇ ಮೈನ್‌ನ ಅಂಬೇಡ್ಕರ್ ಕಾಲೇಜು ಮೈದಾನಕ್ಕೆ ಗೇಟ್ ಇರುವುದಿಲ್ಲ ಹೋಸದಾಗಿ ಗೇಟ್ ಅಳವಡಿಸಲು ಸಭೆಯಲ್ಲಿ ತಿಳಿಸಿದರು. |

ಪು.ತಿ.ನೋ.



Scanned by CamScanner

| | |
|---|---|
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 | ವಾರ್ಡ್‌ನ 2ನೇ ಮೈನ್‌ನ ಅಂಬೇಡ್ಕರ್ ಕಾಲೇಜು ಮೈದಾನಕ್ಕೆ ಗೇಟ್ ಅಳವಡಿಸಲು ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್ ವಾರ್ಡ್‌ನ ನಾಗರೀಕರು. | ವಾರ್ಡ್‌ನ 1ನೇ ಮೈನ್‌ನಲ್ಲಿ ಒಳಚರಂಡಿ ಕಾಮಗಾರಿ ಬಗ್ಗೆ ಕಳೆದ ಸಭೆಗಳಲ್ಲಿ ಚರ್ಚಿಸಿದ್ದು, ಸದರಿ ಸ್ಥಳದಲ್ಲಿ ಒಳಚರಂಡಿ ಲೈನ್ ಹಳೆಯದಾಗಿದ್ದು ಹೊಸ ಲೈನ್ ಅಳಡಿಸುವ ಬಗ್ಗೆ ಸಹಾಯಕ ಅಭಿಯಂತರರು ಕಾಮಗಾರಿ ಕೈಗೆತ್ತುಕೊಳುವುದಾಗಿ ತಿಳಿಸಿರುತ್ತಾರೆ, ಇನ್ನು ಕಾಮಗಾರಿಯು ಪ್ರಾರಂಭವಾಗಿರುವುದಿಲ್ಲಾ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸದರಿ ಸ್ಥಳದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಅಭಿಯಂತರರು ಗೈರು ಹಾಜರಾಗಿದ್ದು ಸದರಿ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಕ್ರಮವಹಿಸುವ ಬಗ್ಗೆ ದೂರವಾಣಿ ಮೂಖೇನ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್ ವಾರ್ಡ್‌ನ ನಾಗರೀಕರು. | ವಾರ್ಡ್‌ನ ರಾಜಾಜಿನಗರ ಮೆಟ್ರೋ ನಿಲ್ದಾಣದ ರಸ್ತೆ ಹಾಗು ಅಕ್ಕಮಹಾದೇವಿ ಕಲ್ಯಾಣ ಮಂಟಪದ ಎದುರು ರಸ್ತೆಯ ಎರಡು ಕಡೆ ಸಾರ್ವಜನಿಕರು ಹಾಗು ಮೆಟ್ರೋ ಪ್ರಯಾಣಿಕರು ನೋ ಪಾರ್ಕಿಂಗ್ ಬೋರ್ಡ್ ಇದ್ದರು ಸಹ ವಾಹನ ನಿಲುಗಡೆ ಮಾಡುತ್ತಿರುತ್ತಾರೆ ರಸ್ತೆಯು ಬಹಳ ಕಿರಿದಾಗಿರುವುದರಿಂದ ಆ ರಸ್ತೆಯ ವಾಹನ ಸವಾರರಿಗೆ ಬಹಳ ತೊಂದರೆ ಉಂಟಾಗುತ್ತಿರುತ್ತದೆ ಮತ್ತು ವಾರ್ಡ್‌ನಲ್ಲಿ ಪಾರ್ಕಿಂಗ್ ಸಂಭಂದಿಸಿದಂತೆ ಪ್ರಾಯೋಗಿಕ ಯೋಜನೆಯನ್ನು ತರುವುದು ಹಾಗು ಪಾರ್ಕಿಂಗ್ ಶುಲ್ಕ ಪಾವತಿಸಿ ವಾಹನ ನಿಲುಗಡೆ ಮಾಡುವ ಯೋಜನೆ ಕಲ್ಪಿಸಬೇಕೆಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ರಾಜಾಜಿನಗರ ಮೆಟ್ರೋ ನಿಲ್ದಾಣದ ರಸ್ತೆ ಹಾಗು ಅಕ್ಕಮಹಾದೇವಿ ಕಲ್ಯಾಣ ಮಂಟಪದ ಎದುರು ಎರಡು ಕಡೆ ವಾಹನ ನಿಲುಗಡೆ ಮಾಡುತ್ತಿರುವುದರಿಂದ ಬಹಳ ಟ್ರಾಫೀಕ್ ಸಮಸ್ಯೆ ಉಂಟಾಗುತ್ತಿರುವುದರಿಂದ ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆರವರು ಕ್ರಮವಹಿಸಲು ಸೂಚಿಸಿದರು. |
| ಶ್ರೀ. ಲಕ್ಷೀಕಾಂತ್ ಜಿ ಬೆಂ.ಜ.ಮಂ ಜಲ ಪರೀವಿಕ್ಷಕರು ಎನ್ ಡಬ್ಲೂ-2. | ವಾರ್ಡ್‌ನ ನಾಗಪುರದ ಅರಬಿಂದು ಕಾಲೇಜು ರಸ್ತೆಯಲ್ಲಿ ನಾಯಿಗಳ ಹಾವಳಿ ಜಾಸ್ತಿಯಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಬೆಂ.ಜ.ಮಂ ಜಲ ಪರೀವಿಕ್ಷಕರ ದೂರಿಗೆ ಸಂಭಂದಿಸಿದಂತೆ ಪಶು ಕೆಲಸ ವಿಭಾಗದವರು ಸಭೆಗೆ ಗೈರು ಹಾಜರಿದ್ದು ದೂರನ್ನು ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಶ್ರೀನಿವಾಸ್ ಗೌಡ ಘ.ತ್ಯಾ.ನಿ ಗುತ್ತಿಗೆದಾರರು | ವಾರ್ಡ್‌ನ ಘನ ತ್ಯಾಜ್ಯ ನಿರ್ವಹಣೆ ಮಾಡುವ ಜಾಗವು ಸರ್ವೋಚ್ಚ ನ್ಯಾಯಾಲಯದಲ್ಲಿದ್ದು ಸದರಿ ಜಾಗದ ಬಗ್ಗೆ ಮುತುವರ್ಜಿ ವಹಿಸಿ ಜಾಗವನ್ನು ಎಂದಿನಂತೆ ಘನ ತ್ಯಾಜ್ಯ ನಿರ್ವಹಣೆ ಮಾಡಲು ಹನುವು ಮಾಡಿ ಕೊಡಲು ಮನವಿ ಮಾಡಿದರು. |

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ ವಾರ್ಡ್ ಕಮಿಟಿ ವಾರ್ಡ್-67 ವಾಟ್ಸ್ ಆಪ್ ಗ್ರೂಪ್ ನಲ್ಲಿ ಮತ್ತು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಪ್ರತಿಯನ್ನು

1. ಮಾನ್ಯ ವಲಯ ಉಪಆಯುಕ್ತರು (ಆಡಳಿತ), ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.



ಪು.ತಿ.ನೋ.

Scanned by CamScanner

3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

23/05/22

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– **67**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– **67**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner